ತುಮಕೂರು ಡಿಸ್ಟ್ರಿಕ್ಟು.

ಇಸ್ತೆಹಾರ್ ಗೊಪ್ಪ್ಯಾರೆ.

ಇದರಿಂದ ತಿಳಿಯಪಡಿಸುವದೇನೆಂದರೆ :—ತುಮಕೂರು ತಾಲ್ಲೂಕು ಕೋಳಾಲದ ಸಮ್ಮತು ಕರೇಕಲ್ಲು ಜೋಡಿಗ್ರಾಮವು 1907ನೆ ಇಸವಿ 16ನೆ ಏಪ್ರೆಲ್ ತಾರೀಖಿನಲ್ಲಿ ಕರೇಕಲ್ಲು ಗ್ರಾಮದಲ್ಲಿ ಕಂದಾಯದ ಬಾಕೀಗಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ವಿಶೇಷ ಸಂಗತಿಗಳಿಗೆ 1907ನೆ ಇಸವಿ ಮಾರ್ಚಿ 14ನೆ ಮತ್ತುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 72—73ನೆ ಪುಟಗಳಲ್ಲಿ ನೋಡಿ.

ಪ್ರಸಿದ್ಧ-ಪತ್ರಿಕೆ.

1. 1906ನೆ ಇಸವಿ VIIನೆ ನಂಬರ್ದ ಮೈಸೂರು ಸೀಮೆಯ ಮ್ಯುನಿಸಿಪಲ್ ರಗ್ಯುಲೇಷನ್ನಿನ 8ನೆ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

ಮೇಲ್ಕಂಡ ರಗ್ಯುಲೇಷನಿನ 7ನೆ ಸೆಕ್ಷನ್ನಿಗೆ ಅನುಸಾರವಾಗಿ ತುಮಕೂರು ಟವ್ನ ಮತ್ತು ಅದರ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಹಾಲಿ ಇರತಕ್ಕ ಈ ಕೆಳಗೆ ನಮೂದಿಸಿರುವ ಪಾಳ್ಯಗಳು ಸೇರಿಸಿ "ಕಾಯಂ ಮ್ಯುನಿಸಿಪಾಲಿಟಿ" ಯನ್ನಾಗಿ ಮಾಡಲ್ಪಡುತ್ತೆ.

ಇದಕ್ಕೆ ಏನಾದರು ಆಕ್ಷೇಪಣೆಗಳು ಇದ್ದಲ್ಲಿ ಅಂಥಾ ಆಕ್ಷೇಪಣೆಗಳನ್ನು ಸಾಕಾವ ಕಾರಣಗಳನ್ನಿಸಿ ಈ ಪ್ರಸಿದ್ಧಪತ್ರಿಕೆಯು ತಾರೀಖು ಲಾಗಾಯ್ತು ಎರಡು ತಿಂಗಳ ಒಳಗಾಗಿ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರರಿಗೆ ಲಿಖಿತಮೂಲಕವಾಗಿ ಕಳುಹಿಸತಕ್ಕದ್ದಿರುತ್ತೆ.

ತುಮಕೂರು ಟವ್ನ ಅದರ ಎರಡು ಎಕ್ಸ್‌ಟೆಂಷನ್‌ಗಳು ಮತ್ತು ಈ ಕೆಳಗೆ ಕಂಡ ಹೆಸರುಳ್ಳ ಪಾಳ್ಯಗಳು.

(1) ಎಕನಾತಮ್ಮನ ಪಾಳ್ಯ
(2) ಹನುಮನಾಯ್ಕನ ಪಾಳ್ಯ.
(3) ಏನವಂಣನ ಪಾಳ್ಯ.
(4) ಸಾಡೇಸಾಹೇರ ಪಾಳ್ಯ.
(5) ಅರ್ಜಿ ರಂಗಂಣನ ಪಾಳ್ಯ.
(6) ಅರಳಿಮರದ ಪಾಳ್ಯ.
(7) ಹೊನ್ನನಾಯಕನ ಪಾಳ್ಯ.
(8) ಅಮಿನುದ್ದೀನಸಾಬರ ಪಾಳ್ಯ.
(9) ಬಾಳೇಗೌಡನ ಪಾಳ್ಯ.
(10) ಕಂಬಾಳಿಯ್ಯನಪಾಳ್ಯ.
(11) ಭೀಮನಾಯಕನಪಾಳ್ಯ.
(12) ಕುರಿಪಾಳ್ಯ.
(13) ಗುಡಿಯಪ್ಪನ ಪಾಳ್ಯ.
(14) ಹೊಲೇರಹಟ್ಟಿ.
(15) ಗರಡಿ ಚಿಕ್ಕಂಣನಪಾಳ್ಯ.
(16) ಟಾನರಿ.
(17) ಮಾದಿಗರಹಟ್ಟಿ.

ಎಂ. ಶ್ರೀನಿವಾಸಮೂರ್ತಿ,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 19ನೆ ಮಾರ್ಚಿ 1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನೆಂದರೆ. (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ಏಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲೀ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ, ಖರ್ಚುಗಳು ಸೇರಿಸಿ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.